

# ‘ಆ್ಯಂಟಿ ಗ್ಲಾಮರ್’ ಪಾತ್ರದ ಒಲವಿನಲ್ಲಿ ಮೋಕ್ಷಾ

ಗ್ಲಾಮರಸ್ ಆಗಿ ಮಿಂಚುವುದಕ್ಕಿಂತ ನಟನೆಯೇ ಮೇಕಪ್ ಆಗಬಲ್ಲಂಥ ಪಾತ್ರ ಎಂದಿಗೂ ನನ್ನ ನಿರೀಕ್ಷೆಯಾಗಿರುತ್ತದೆ ಎನ್ನುವ ನಟಿ ಮೋಕ್ಷಾ ಕುಶಾಲ್, ಧನಂಜಯ್ ಅಭಿನಯದ ‘ಕೋಟಿ’ ಸಿನಿಮಾದಲ್ಲಿ ನಟಿಸುತ್ತಿದ್ದಾರೆ. ಸಿನಿ ಬದುಕಿನ ತಮ್ಮ ಹೆಜ್ಜೆಗಳ ಕುರಿತು ಮಾತನಾಡಿದ್ದಾರೆ.

■ ಸುಮಲತಾ ಎನ್.

‘ಚಿಕ್ಕವಳಿದ್ದಾಗ ಪ್ರತಿದಿನ ಒಂದೊಂದು ಕನಸು ಕಾಣುತ್ತಿದ್ದೆ. ಒಂದು ದಿನ ಡಾಕ್ಟರಾಗಬೇಕು ಅನ್ನುತ್ತಿದ್ದೆ. ಇನ್ನೊಂದು ದಿನ ಟೀಚರ್ ಆಗ್ತೀನಿ ಅನ್ನುತ್ತಿದ್ದೆ. ಮತ್ತೂ ಒಂದು ದಿನ ಅಸ್ಟ್ರಾನಟ್ ಆಗುತ್ತೇನೆ ಎಂದು ಹೇಳಿಕೊಳ್ಳುತ್ತಾ ಖುಷಿಪಡುತ್ತಿದ್ದೆ. ಆ್ಯಕ್ಟರ್ ಆಗುತ್ತೇನೆ ಎಂದು ಯಾವತ್ತೂ ನಾನು ಬಾಯಿತಪ್ಪಿಯೂ ಹೇಳಿರಲಿಲ್ಲ...’

ಸಿನಿಮಾರಂಗಕ್ಕೆ ಬಂದ ಹಿನ್ನೆಲೆಯ ಕುರಿತ ಪ್ರಶ್ನೆಗೆ ಹೀಗೆ ನಗುತ್ತಲೇ ಉತ್ತರಿಸಿದರು ನಟಿ ಮೋಕ್ಷಾ ಕುಶಾಲ್.

ಧನಂಜಯ್ ಅಭಿನಯದ ‘ಕೋಟಿ’ ಸಿನಿಮಾದಲ್ಲಿ ನಟಿಸುತ್ತಿರುವ ಅವರಲ್ಲೀಗ ಸಿನಿಮಾರಂಗದ ಕುರಿತು ಹೊಸ ಕನಸು ಹುಟ್ಟಿಕೊಂಡಿದೆ. ಹೊಸ ಹೊಸ ತರಹದ ಪಾತ್ರಗಳನ್ನು ಮಾಡಬೇಕೆಂಬ ಉತ್ಸಾಹವೂ ಜೊತೆಯಾಗಿದೆ.

ಕೊಡಗಿನ ಬೆಡಗಿ ಮೋಕ್ಷಾ ಓದಿದ್ದು ಎಂಜಿನಿಯರಿಂಗ್. ಕಾಲೇಜು ದಿನಗಳಲ್ಲಿ ಮಾಡೆಲಿಂಗ್, ಫ್ಯಾಷನ್ ಶೋ ನಂಟು ಬೆಸೆದುಕೊಂಡದ್ದು ಅವರನ್ನು ಸಿನಿಮಾಲೋಕದತ್ತ ಬರಲು ಪ್ರೇರೇಪಿಸಿತ್ತು.

‘ಶಾಲಾ ಕಾಲೇಜಿನಲ್ಲಿ ನಾನು ಆಲ್‌ರೌಂಡರ್ ಆಗಿದ್ದೆ. ಓದು, ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆ ಎಲ್ಲದರಲ್ಲೂ ಮುಂದಿದ್ದೆ. ಕಾಲೇಜಿನಲ್ಲಿ ಫ್ಯಾಷನ್ ಟೀಮ್ ಲೀಡ್ ಮಾಡ್ತಿದ್ದೆ. ಹಲವು ಫ್ಯಾಷನ್ ಶೋಗಳಲ್ಲಿ ಗೆದ್ದಿದ್ದೆವು ಕೂಡ. ಫ್ಯಾಷನ್ ಶೋನಲ್ಲಿ ನನ್ನ ಹೆಸರು ಕೂಗುತ್ತಿದ್ದರು, ನನ್ನನ್ನು ಹೊಗಳುತ್ತಿದ್ದರು. ಆಗ ಅದೊಂಥರ ಖುಷಿ ನೀಡುತ್ತಿತ್ತು. ಎಂಜಿನಿಯರಿಂಗ್ ಮುಗಿಯುತ್ತಿದ್ದಂತೆ, ಇದೆಲ್ಲಾ ಕೊನೆಯಾಗಿಬಿಡುತ್ತಾ ಅಂತ ಬೇಸರ ಶುರುವಾಯಿತು. ಆಗ ನಾನು ನಿರ್ಧರಿಸಿದೆ, ನನ್ನನ್ನು ಎಕ್ಸ್‌ಪ್ಲೋರ್ ಮಾಡುವಂಥ ಪ್ರೊಫೆಷನ್ ತೆಗೆದುಕೊಳ್ಳಬೇಕು, ನಟಿಯಾಗಬೇಕು ಎಂದು...’ ವಿವರಿಸಿದರು ಮೋಕ್ಷಾ.

‘ನವರತ್ನ’ ಚಿತ್ರದ ಮೂಲಕ ಸಿನಿಮಾರಂಗದ ಕೆಲವು ಪಾಠಗಳನ್ನು ಅರಿತರು. ಅದಕ್ಕೂ ಮುನ್ನ ಜಾಹೀರಾತು, ಕಿರುಚಿತ್ರಗಳಲ್ಲಿ ನಟಿಸಿದ್ದರು. ನಿರ್ದೇಶಕ ಸಿಂಪಲ್ ಸುನಿ ಅವರ ‘ಮೋಡ ಕವಿದ ವಾತಾವರಣ’ ಸಿನಿಮಾದಲ್ಲಿ ನಟಿಸಿದ್ದು, ಅದು ಕೂಡ ಬಿಡುಗಡೆಯ ಹಾದಿಯಲ್ಲಿದೆ.

ಮೋಕ್ಷಾ ಅವರಿಗೆ ಆ್ಯಂಟಿ ಗ್ಲಾಮರಸ್ ಪಾತ್ರಗಳಲ್ಲಿ ತಮ್ಮನ್ನು ತಾವು ಕಂಡುಕೊಳ್ಳುವ ಆಸೆ. ಮೇಕಪ್ ಇಲ್ಲದಂಥ, ನಟನೆಯೇ ಮುನ್ನೆಲೆಯಲ್ಲಿರುವಂಥ ವರ್ಸಟೈಲ್ ಪಾತ್ರಗಳಲ್ಲಿ ತೊಡಗಿಸಿಕೊಳ್ಳಲು ಬಯಸುವ ಅವರಿಗೆ, ಐತಿಹಾಸಿಕ, ಪೌರಾಣಿಕ ಕಥೆಗಳಲ್ಲಿ ನಟಿಸುವ ಹಂಬಲ.

‘ನೋಡಲು ಚೆನ್ನಾಗಿದ್ದಾರೆ ಎಂದು ಸುಮ್ಮನೆ ಸಿನಿಮಾದಲ್ಲಿ ಬೊಂಬೆಯಂತೆ ತೋರಿಸುವುದಕ್ಕಿಂತ, ಗ್ಲಾಮರಸ್ ಹೀರೋಯಿನ್ ಎಂದು ಕರೆಸಿಕೊಳ್ಳುವುದಕ್ಕಿಂತ, ನಟನೆಯಿಂದಲೇ ಗುರುತಿಸಿಕೊಳ್ಳುವಂಥ ಸಿನಿಮಾಗಳು ಒಬ್ಬ ಕಲಾವಿದೆಗೆ ಅವಶ್ಯವಾಗಿರುತ್ತದೆ. ಅಂಥ ಪಾತ್ರಗಳು ನನ್ನ ನಿರೀಕ್ಷೆಯೂ ಆಗಿದೆ’ ಎಂದು ನಗುತ್ತಾರೆ. ■

